ಹಾಸನ ಜಿಲ್ಲೆಯಲ್ಲಿ ಆಲೂಗಡ್ಡೆ ಬೆಳೆಗೆ ಬಂದಿರುವ ರೋಗ ನಿವಾರಿಸುವ ಕ್ರಮಗಳು

೭. ಶ್ರೀ ಕೆ. ಎಚ್. ಹನುಮೆಗೌಡ (ಹಾಸನ)—

ವ್ಯವಸಾಯ ಹಾಗು ಅರಣ್ಯ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೇ :—

(ಅ) ಹಾಸನ ಜಿಲ್ಲೆಯಲ್ಲಿ ಆಲೂಗಡ್ಡೆ ಬೆಳೆಯು ಯಾವ ಯಾವ ರೋಗಗಳಿಂದ ಬೆಳೆ ಹಾಳಾಗುತ್ತಲಿದೆ ;

(ಆ) ಈ ರೋಗ ತಡೆಯಲು ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆ ;

(ಇ) ಇದರ ಬಾಬ್ತು ಸರ್ಕಾರಕ್ಕೆ ಯಾವ ಯಾವ ಬಾಬಿನಿಂದ ಎಷ್ಟೆಷ್ಟು ಹಣ ವರ್ಷೇ ವರ್ಷೇ ಖರ್ಚಾಗುತ್ತಿದೆ ?

ಶ್ರೀ ಕೆ. ಎಚ್. ಪಾಟೀಲ್ (ವ್ಯವಸಾಯ ಹಾಗು ಅರಣ್ಯ ಮಂತ್ರಿಗಳು) :—

ಉತ್ತರ :—(ಅ) (೧) ಲೇಟ್ ಬ್ಲೈಟ್ (ಮಾದಿಗ ರೋಗ, ತಡವಾಗಿ ಬರುವ ಭೂಸುರ ರೋಗ).

(೨) ಬ್ಲಾನ್ ರಾಟ್ (ದೊಮ್ಮೆ ರೋಗ, ರಿಂಗ್ ರೋಗ).

(೩) ಕಚ್ಚೆಹುಳು ಎಂಬ ಕೀಟವು ಆಲೂಗೆಡ್ಡೆಗೆ ಹೊಲದಲ್ಲೂ ಮತ್ತು ಶೇಖರಣಾಲಯದಲ್ಲೂ ಬಹಳ ಹಾನಿಯನ್ನುಂಟುಮಾಡುತ್ತಿದೆ.

(ಆ) ಈ ಕಳಗೆ ಏರ್ಪಾಡಿಸಿರುವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

(೧) ಸಸ್ಯ ಸಂರಕ್ಷಣೆಯ ಅಂಗವಾಗಿ ೫೦ ಲಕ್ಷ ರೂಪಾಯಿ ಸಸ್ಯ ಸಂರಕ್ಷಣೆ ಔಷಧಿಗಳನ್ನು ಕೊಂಡು ಅರ್ಧ ಬೆಲೆಗೆ ಒದಗಿಸಲಾಗಿದೆ. ಈ ರೋಗ ಬೀಳುವ ಹವಾಮಾನದ ಲಕ್ಷಣಗಳು ಅನುಕೂಲ ಪರಿಸ್ಥಿತಿಗೆ ಬಂದೊಡನೆಯೇ ಎಲ್ಲಾ ಸಿಬ್ಬಂದಿಗಳನ್ನೂ ಒಂದುಗೂಡಿಸಿ ಗ್ರಾಮ ಪಂಚಾಯತಿ ಕಛೇರಿಗಳಲ್ಲಿ ಔಷಧ ಮತ್ತು ಸಿಂಪಡಿಸುವ ಉಪಕರಣಗಳ ಸಮೇತ ಸುವ್ಯವಸ್ಥಿತ ಸಿಬ್ಬಂದಿಗಳನ್ನು ಗೊತ್ತುಪಡಿಸಿ ಆ ಮುಖಾಂತರ ಸಾಧ್ಯವಾದ ಮಟ್ಟಿಗೆ ಎಲ್ಲಾ ಆಲೂಗಡ್ಡೆ ಹೊಲಗಳಿಗೂ ಔಷಧಿ ನಿವಾರಣೆಗಾಗಿ ಅಂತಹ ಸಂದರ್ಭದಲ್ಲಿ ಸಂಚಾರಿ ವಾಹನವೊಂದನ್ನು ನೇಮಿಸಿ ನಿಯಮಿತ ವೇಳೆಯಲ್ಲಿ ರೋಗವು ಬೇರೆ ಕಡೆಗೆ ಹರಡದಂತೆ ಮುತ್ತಿಗೆ ಹಾಕಿ ಹತೋಟಿಯಲ್ಲಡುವ ಕ್ರಮವನ್ನು ಅತ್ಯಂತ ಸಾಧಕ ಮಟ್ಟದಲ್ಲಿ ನೆರವೇರಿಸಲಾಗುತ್ತಿದೆ.

(೨) ಬ್ಲೈಟ್ ರೋಗ ನಿರೋಧಕ ಶಕ್ತಿಯುಳ್ಳ ಬಿತ್ತನೆ ಬೀಜಗಳನ್ನು ಬೆಳೆಸಿ ಒದಗಿಸಲಾಗಿದೆ.

(೩) ಬ್ಲಾನ್ ರಾಟ್ ಖಾಯಿಲೆಯ ನಿಯಂತ್ರಣಕ್ಕಾಗಿ ಹಾಲು ಬೀಜೋತ್ಪಾದನೆ ಅಂಗವಾಗಿ ಕೆಲಸ ಮಾಡುವ ಸಿಬ್ಬಂದಿ ವರ್ಗ ರೋಗಾಣುಗಳು ಸ್ಥಳಾಂತರಗೊಳ್ಳದಂತೆ ಮಾಡಲು ಸೂಕ್ತ ಸಲಹೆಗಳನ್ನು ಒದಗಿಸಲಾಗಿದೆ. ಅಲ್ಲದೆ ನೈರ್ಮಲ್ಯ ವ್ಯವಸ್ಥೆಗಳನ್ನು ಸೂಚಿಸಿ ರೋಗಾಣುಗಳು, ಮಣ್ಣಿನ, ನೀರಿನ, ನೇಗಿಲಿನ, ಮತ್ತು ಉಪಕರಣಗಳ ಮುಖಾಂತರ ಸ್ಥಳಾಂತರಗೊಳ್ಳದಂತೆ ಎಚ್ಚರಿಕೆ ವಹಿಸುವ ನಿಯಮಗಳನ್ನು ತಿಳಿಸಿಕೊಡಲಾಗುತ್ತಿದೆ.

(೪) ಕಚ್ಚೆಹುಳುವಿನ ನಿಯಂತ್ರಣಕ್ಕಾಗಿ ಕಾಮನ್‌ವೆಲ್ತ್ ಬಯೋಲಾಜಿಕಲ್ ಇನ್‌ಸ್ಟಿಟ್ಯೂಟ್ ಬೆಂಗಳೂರು ಅವರ ಸಲಹೆ ಮೇರೆಗೆ ನಿಯಂತ್ರಣದ ಬಗ್ಗೆ ಸೂಕ್ತ ತಾಂತ್ರಿಕ ಸಲಹೆಗಳನ್ನು ಒದಗಿಸುತ್ತಿದೆ.

ತಾತ್ಕಾಲಿಕವಾಗಿ ಕಚ್ಚೆಹುಳುವನ್ನು ಹತೋಟಿಯಲ್ಲಿಡುವ ಆಧುನಿಕ ವ್ಯವಸಾಯ ಪದ್ಧತಿಗಳನ್ನು ಅಭಿವೃದ್ಧಿಪಡಿಸಿ ಕಚ್ಚೆಹುಳುವಿನ ಜೀವನ ಚರಿತ್ರೆಯನ್ನು ಸಂಪೂರ್ಣವಾಗಿ ಪರಿಶೀಲಿಸಿ ತತ್ಸಂಬಂಧವಾಗಿ ಅನುಸರಿಸಬೇಕಾದ ಕಾರ್ಯಗಳನ್ನು ಅಂದರೆ ಮಳೆಗಾಲದ ಆಲೂಗೆಡ್ಡೆಯನ್ನು ಆಗಷ್ಟು ತಿಂಗಳಲ್ಲೇ ಕೀಳುವಂತೆಯೂ ಬೇಸಿಗೆ ಕಾಲದಲ್ಲಿ ಮಾರ್ಚಿಯಲ್ಲಿ ಕೀಳುವಂತೆಯೂ ಹಾಗೂ ಶೇಖರಣಾ ಸ್ಥಳದಲ್ಲಿ ಸುವ್ಯವಸ್ಥಿತವಾಗಿ ಶೇಖರಿಸಿ ಮುಚ್ಚಿ ಮೇಲಾಥಿಯನ ೫% ಧೂಳಿಯಿಂದ ಉಪಚರಿಸುವಂತೆಯೂ ಶೀತಲಗೃಹದಲ್ಲಿ ಆಲೂಗೆಡ್ಡೆಯನ್ನು ಶೇಖರಿಸುವಂತೆಯೂ ಸಲಹೆ ಮಾಡಲಾಗುತ್ತಿದೆ.

(ಶ್ರೀ ಕೆ. ಹೆಚ್. ಪಾಟೀಲ್)

(ಇ) (೧) ೧೯೭೬-೭೭ ರಲ್ಲಿ ಕಚ್ಚೆಹುಳು ನಿಯಂತ್ರಣಕ್ಕಾಗಿ ೫೦೦೦ ರೂಪಾಯಿ ವೆಚ್ಚ ತಗುಲಿದೆ.

(೨) ಸಸ್ಯ ಸಂರಕ್ಷಣೆಗೆ ೭೧-೭೨ ರಲ್ಲಿ ೫.೫೧ ಲಕ್ಷ ರೂಪಾಯಿ ಬ್ಲಾನ್ ರಾಟ್ ಬ್ಲೈಟ್ ರೋಗ ನಿಯಂತ್ರಿಸುವ ಕಾರ್ಯದಲ್ಲಿ ವೆಚ್ಚ ತಗಲಿರುತ್ತದೆ.

(೩) ೧೯೭೨-೭೩, ೧೯೭೩-೭೪ ಸಾಲುಗಳಲ್ಲಿ ಬ್ಲೈಟ್ ರೋಗ ನಿರೋಧಕ ಶಕ್ತಿಯುಳ್ಳ ಬಿತ್ತನೆ ಬೀಜಗಳನ್ನು ಬೆಳೆಸಿ ಒದಗಿಸುವ ಬಿತ್ತನೆ ಬೀಜಕ್ಕಾಗಿ, ೪೦,೦೦೦ ರೂಪಾಯಿ ವೆಚ್ಚ ತಗಲಿರುತ್ತದೆ.

ಹೇಮಾವತಿ ನದಿಯಿಂದ ಹಾಸನ ಟೌನಿಗೆ ನೀರು ಸರಬರಾಜು ಮಾಡುವ ಯೋಜನೆ

೮. ಶ್ರೀ ಕೆ. ಎಚ್. ಹನುಮೆಗೌಡ (ಹಾಸನ).—

ನಗರಾಡಳಿತ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ:—

(ಅ) ಹಾಸನ ಟೌನಿನಲ್ಲಿ ಕುಡಿಯುವ ನೀರು ಸಾಕಷ್ಟು ಪ್ರಮಾಣದಲ್ಲಿ ಸರಬರಾಜು ಆಗದೆ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹೇಮಾವತಿ ನದಿಯಿಂದ ಕುಡಿಯುವ ನೀರನ್ನು ಹಾಸನದ ಟೌನಿಗೆ ಸರಬರಾಜು ಮಾಡಲು ಪ್ಲಾನ್ ಮತ್ತು ಅಂದಾಜು ತಯಾರಾಗಿದೆಯೇ ; ಆಗಿದ್ದರೆ ಅಂದಾಜು ಮೊಬಲಗೆಷ್ಟು ;

(ಇ) ಈ ಕೆಲಸ ಯಾವಾಗ ಪ್ರಾರಂಭವಾಗಲಿದೆ ?

ಶ್ರೀ ಬಿ. ಬಸವಲಿಂಗಪ್ಪ (ನಗರಾಡಳಿತ ಮಂತ್ರಿಗಳು).—

ಉತ್ತರ.—(ಅ) ಬಂದಿದೆ.

(ಆ) ತಯಾರಾಗಿದೆ. ಅಂದಾಜು ಮೊಬಲಗು 144 ಲಕ್ಷ.

(ಇ) ತಾರೀಖು 7.2-1973 ರಂದು ಪ್ರಾರಂಭವಾಗಿದೆ.

ಚಿಕ್ಕಮಗಳೂರು ಜಲ್ಲೆಯಲ್ಲಿ ಕನಬಾ ಹೋಬಳಿ ಹಲಸಬಾಳು ಗ್ರಾಮವಲ್ಲಿನ ಜಮೀನಿಗೆ ಕೋರಿ ಬಂದ ಅರ್ಜಿಗಳು

೧೧. ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ).—

ಕಂದಾಯ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ಚಿಕ್ಕಮಗಳೂರು ತಹಸಿಲ್ದಾರರಿಗೆ ಕನಬಾ ಹೋಬಳಿ ಹಲಸಬಾಳು ಗ್ರಾಮದಲ್ಲಿನ ಸ. ನಂ. 35 ಹಾಗೂ 40ನೇ ಜಮೀನನ್ನು ಕೋರಿ ಅರ್ಜಿ ಹಾಕಿಕೊಂಡ ವ್ಯಕ್ತಿಗಳ ಸಂಖ್ಯೆ ಎಷ್ಟು ? ಮತ್ತು ಅರ್ಜಿ ಹಾಕಿಕೊಂಡ ದಿನಾಂಕಗಳಾವುವು ;

(ಆ) ಹಾಗಿದ್ದಲ್ಲಿ ಅವು ಅಂತಹ ರಿಕಾರ್ಡುಗಳು ಯಾವ ಹಂತದಲ್ಲಿವೆ ;

(ಇ) ಈ ಕಡತಗಳನ್ನು (ರಿಕಾರ್ಡುಗಳನ್ನು) ಸ್ಪೆಷಲ್ ದರಖಾಸ್ತು ಅಸಿಸ್ಟೆಂಟರವರ ಗಮನಕ್ಕೆ ಕಳುಹಿಸಲಾದ ದಿನಾಂಕ ಯಾವುದು ಇವುಗಳನ್ನು ಅಂತಿಮಗೊಳಿಸುವುದಕ್ಕೆ ಗರಿಷ್ಟ ಕಾಲಮಿತಿಯನ್ನೇನಾದರೂ ಸರ್ಕಾರದವರು ನಿಗದಿ ಮಾಡಿದ್ದಾರೆಯೆ ;

(ಈ) ಸದ್ರಿ ಕಾಗದ ಪತ್ರಗಳು ಎಷ್ಟು ಕಾಲದಿಂದ ಸ್ಪೆಷಲ್ ಆಗಿ ಅಸಿಸ್ಟೆಂಟ್ ಕಮೀಷನರ್ ರವರ ಆಫೀಸಿನಲ್ಲಿ ಇತ್ಯರ್ಥವಾಗದೆ ಹಾಗೆ ಉಳಿದಿವೆ ;